ಬದುಕಿನಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಕಾಲ. ಪ್ರತಿಯೊಬ್ಬರ ಜೀವನದಲ್ಲೂ ಇಂತಾ ಗಳಿಗೆಗಳು ಬಂದೇ ಬಂದಿರುತ್ತವೆ. ಮತ್ತೆ ಅವು ಮರುಕಳಿಸಲಾಗದಂತಾ ಸಂದರ್ಭ ಸೃಷ್ಟಿಯಾಗಿಬಿಟ್ಟಿತೆಂದರೆ ಕಳೆದು ಹೋದ ಕಾಲ ಸುವರ್ಣಕಾಲವೇ, ಯಾವತ್ತಿಗೂ..

ಹೆಂಡತಿಯನ್ನು ತೌರಿಗೆ ಕಳಿಸಿ ವಾಪಸು ಬಂದನಲ್ಲ ರಾಮಚಂದ್ರ, ನಾಗಶ್ರೀಯ ಅನುಪಸ್ಥಿತಿ ಮುಖಕ್ಕೆ ಹೊಡೆಯುವಂತಿದ್ದ ಮನೆಯಲ್ಲಿ ಅವನಿಗೆ ಬೇಜಾರು ಅನಿಸುತ್ತಿದ್ದುದು ಸಹಜ. ಬೇಸಿಗೆ ಕಾಲ. ಮನೆಯಲ್ಲಿ ಹಪ್ಪಳ, ಸಂಡಿಗೆ, ಉಪ್ಪಿನಕಾಯಿಗಳ ತಯಾರಿಯ ಭರಾಟೆ. ಅಮ್ಮ ಹೇಳುತ್ತಿದ್ದ ಕೆಲಸಗಳನ್ನು ಮಾಡಿಕೊಡುತ್ತಾ ಕಾಲ ಹಾಕುತ್ತಿದ್ದ ರಾಮಚಂದ್ರ. ಹೆರಿಗೆಯ ಕಾಲ ಹತ್ತಿರವಾಗುತ್ತಿದ್ದಂತೆ ಅವನ ಎದೆಬಡಿತ ತಾಳ ತಪ್ಪುತ್ತಿತ್ತು. ಇನ್ನೇನು ಮಾವನಮನೆಗೆ ಹೊರಟುಬಿಡುವುದೇ. ತನ್ನ ಅವಶ್ಯಕತೆ ಅಲ್ಲಿ ಇದ್ದೇ ಇರುತ್ತದೆ, ಚೊಚ್ಚಲು ಹೆರಿಗೆಯ ಸಂದರ್ಭದಂತೆ. ದಿವಸಾ ಎನ್ನುವಂತೆ ಫೋನ್ ಮಾಡುತ್ತಿದ್ದಳು ನಾಗಶ್ರೀ. ಹರಟಲು ಏನಿಲ್ಲದಿದ್ದರೂ ಮೆಲುದನಿಯಲ್ಲಿ ನಡೆಯುತ್ತಿತ್ತು ಸಂಭಾಷಣೆ. ಮುಂಚೇಕಡೆಯಲ್ಲಿ ಅಮ್ಮ ಕೂತಿದ್ದಾಳೆಂದರೆ ಇನ್ನಷ್ಟು ತಗ್ಗುತ್ತಿತ್ತು ರಾಮಚಂದ್ರನ ದನಿ. ರಘುರಾಮ ಸೂಕ್ಷ್ಮ ಗ್ರಹಿಕೆಯವನು. ನಾದಿನಿಯ ಫೋನ್ ಬಂದರೆ ಅವನು ಅಲ್ಲಿಂದ ಜಾಗ ಖಾಲಿ ಮಾಡುತ್ತಿದ್ದ. ಆದರೆ ರಾಧಮ್ಮನಿಂದ ಈ ನಡವಳಿಕೆ ನಿರೀಕ್ಷಿಸುವಂತಿರಲಿಲ್ಲ. ಮಗ ಫೋನ್ ಇಡುತ್ತಿದ್ದಂತೆ,

ಏನೋ? ಹುಷಾರಿದಾಳಂತಾ? ಉತ್ಕಟತೆಯಿಂದ ಕೇಳುತ್ತಿದ್ದರು ರಾಧಮ್ಮ.

ಹೂಂ..

ಮತ್ತೆಂತ ಸಮಾಚಾರ?

ಸಮಾಚಾರ ಎಂತದು? ಏನೂ ಇಲ್ಲ..

ಏನೂ ಇಲ್ದೆ ಅರ್ಧ ಗಂಟೆ ಮಾತಾಡಿದ್ದಾ?

ಪುಟ್ಟಿ ಏನ್ಮಾಡುತ್ತಂತೆ?

ಅವಳಿಗೇನು? ಆಟ ಆಡ್ಕಂಡು ಖುಷಿಯಾಗಿರ್ತಾಳೆ..

ಏನೇ ಹೇಳು, ನಮ್ಮನೆ ಮಗು ನಮಗೇ ದೂರ ದೂರ ಆಗ್ಬಿಡ್ತು

ಶುರುವಾಯ್ತಾ ಹಳೇ ರಾಗ? ಏನಾಯ್ತು ಈಗ? ನಿಂಗೆ ನೋಡ್ಬೇಕು ಅನ್ನಿಸಿದಾಗ್ಲೆಲ್ಲಾ ಕರ್ಕಂಡು ಹೋಗಲ್ಲನೇ?

ಆದರೂ ಒಟ್ಟಿಗಿದ್ದಂಗೆ ಆಗುತ್ತಾ?

ರಾಧಮ್ಮ ಕೊರಕೊರ ಅನ್ನುತ್ತಿದ್ದರು. ಏನೋ ಒಂದು ವಿಷಯ ಹಿಡಿದು ರಗಳೆ ಮಾಡುವುದು ವಯೋಸಹಜ ಅನಿಸುತ್ತಿತ್ತು ರಾಮಚಂದ್ರನಿಗೆ. ಪೂರ್ಣಿಮಾ ಆ ಅಜ್ಜನ ಮನೆಯಲ್ಲಿರುವುದನ್ನು ಒಪ್ಪಿಕೊಂಡಿದ್ದರೂ ಕೆಲವೊಮ್ಮೆ ಎಂತದೋ ಕಿರಿಕಿರಿ.

ಈ ಸಲ ಅಲ್ಲಿಗೆ ಹೋಗ್ಬೇಕಾರೆ ನೀನೂ ಬಾ... ಅಂದಿದ್ದ ರಾಮಚಂದ್ರ.

ಬರ್ದೆ ಬಿಡ್ತೀನಾ? ಮೊಮ್ಮಗನ್ನ ನೋಡ್ಬೇಕಲ್ಲ? ನೋಡು, ನೋಡು, ಚೆನ್ನಾಗಿ ನೋಡ್ಕಂಬಿಡು ಎಂದು ಹಂಗಿಸಿತಾ ವಿಧಿ? ನಾಗಶ್ರೀ ಗಂಡು ಮಗುವನ್ನು ಹೆತ್ತು, ಹನ್ನೆರಡನೆಯ ದಿನ ವಿಜೃಂಭಣೆಯ ನಾಮಕರಣ ಮಹೋತ್ಸವ ನಡೆದು, ಅನಂತ ಪದ್ಮನಾಭ ಅಂತ ಹೆಸರಿಟ್ಟರೆ ಲಾಯ್ಕಿತ್ತು ಎನ್ನುವ ರಾಧಮ್ಮನ ಅಪೇಕ್ಷೆಯಂತೆ ಎಳೆ ಬೊಮ್ಮಟೆಗೆ ಅದೇ ಹೆಸರು ಸ್ಥಿರವಾಗಿ, ಊರಿಗೆ ವಾಪಸು ಬಂತು ರಾಮಚಂದ್ರನ ಪರಿವಾರ. ಅದಾದ ಎರಡನೇ ದಿನ. ಮಳೆಗಾಲಕ್ಕೆ ಮುಂಚೆ ವರ್ಷವಿಡೀ ಬಳಸಲು ಬೇಕಾದ ಕಾಳುಕಡಿ ತಂದು ಸ್ವಚ್ಛ ಮಾಡಿ ಬಿಸಿಲಲ್ಲಿ ಒಣಗಿಸಿ ಶೇಖರಿಸಿಟ್ಟುಕೊಳ್ಳುವ ಯಾವಾಗಿನ ಪದ್ಧತಿಯಂತೆ ದಿನಸಿ ತರಲು ಪೇಟೆಗೆ ಹೋಗಿದ್ದ ರಘುರಾಮ. ನಾಲ್ಕು ಅಂಗಡಿ ಮೆಟ್ಟಿಲು ಹತ್ತಿಳಿದು ಎಲ್ಲಿ ಅಗ್ಗವೆನಿಸುತ್ತದೆಯೋ ಅಥವಾ ಕೊಳ್ಳುವ ಸಾಮಾನಿಗೆ ಕೊಡುವ ದರ ಯೋಗ್ಯ ಅನಿಸುತ್ತದೆಯೋ ಅಂತಲ್ಲಿ ವ್ಯಾಪಾರ ಮಾಡುವುದು ರಘುರಾಮನ ಅಭ್ಯಾಸ. ದುಡ್ಡು ಖರ್ಚು ಮಾಡುವ ವಿಷಯದಲ್ಲಿ ಅವನು ಬಿಗಿ. ಊರ ಕಡೆಯಿಂದ ಹೋಗಿರುತ್ತಿದ್ದ ಟಿಲ್ಲರಿನಲ್ಲಿ ಕೊಂಡ ಸಾಮಾನುಗಳನ್ನು ತುಂಬಿ ತಾನು ಬಸ್ಸು ಹಿಡಿದು ಬರುವುದು ಅವನ ಪದ್ಧತಿ. ಅವತ್ತೂ ಹಾಗೇ. ಸಾವಿರಾರು ರೂಪಾಯಿಗಳ ವ್ಯವಹಾರ ಮುಗಿಸಿ, ಹೋಟೆಲಿನಲ್ಲಿ ಒಂದು ಮಸಾಲೆ ದೋಸೆ, ಒಂದು ಲೋಟ ಖಡಕ್ ಕಾಫಿ. ಮಗನಿಗೆಂದು ಕೈಚೀಲದಲ್ಲಿ ಬಿಸ್ಕತ್ತಿನ ಪೊಟ್ಟಣಗಳು. ಊರಿನ ಬಸ್ಸು ಹತ್ತಿದ್ದ ರಘುರಾಮ. ಯಾವತ್ತೂ ಏಳನೇ ತಿಂಗಳಲ್ಲಿ ಹುಟ್ಟಿದವರ ಥರ ಅವಸರ ಜಾಸ್ತಿ ರಘುರಾಮನಿಗೆ.



ರಾಧಮ್ಮನಿಗೆ ತನ್ನ ಮೊಮ್ಮಗಳನ್ನು ಬಿಟ್ಟಿರುವ ಮನಸ್ಸಿಲ್ಲ. ಸೊಸೆಯ ತವರಿನಿಂದ ಮೊಮ್ಮಗಳನ್ನು ಕರೆದುಕೊಂಡು ಬಾ ಎಂದು ಹೇಳಿದ್ದಕ್ಕೆ ಮಗನಿಂದ ಅನಿರೀಕ್ಷಿತ ಉತ್ತರವನ್ನು ಕೇಳಿದ್ದಳು. ಮಗ– ಸೊಸೆ ಮಗುವನ್ನು ನೋಡಲು ಹೋಗುವಾಗ ಒತ್ತಾಯ ಮಾಡಿ ಕರೆದರು. ಮಗು ನೋಡುವ ಖುಷಿಗಾಗಿ ರಾಧಮ್ಮ ಹೊರಟಿದ್ದರು. ಮಗುವನ್ನು ತೌರಿನಲ್ಲಿ ಬಿಟ್ಟ ನಂತರ ನಾಗಶ್ರೀ– ರಾಮಚಂದ್ರ ಮತ್ತೆ ನವ ದಂಪತಿಗಳಂತೆ ಆಗಿದ್ದರು.

ದಂಪತಿ ಎರಡನೇ ಮಗುವಿನ ನಿರೀಕ್ಷೆಯಲ್ಲಿ ಇದ್ದಾರೆ. ಜನಿಸುವ ಮಗು ಹೆಣ್ಣೋ– ಗಂಡೋ ಎಂಬ ಬಗ್ಗೆ ಮಾತಾಡಿದರೆ ರಾಧಮ್ಮ ಮೈಬಣ್ಣ ನೋಡಿದರೆ ಗಂಡೇ ಆಗುತ್ತದೆ ಎಂದು ಹೇಳಿದರು.

'ಏನಾರೂ ತಿನ್ಬೇಕು ಅನ್ನಿದ್ರೆ ಬಾಯ್ಬಿಟ್ಟು ಹೇಳೇ. ಬಯಕೆ ತೀರಿಸ್ಕಳ್ದಿದ್ರೆ ಹುಟ್ಟೋ ಮಗೀಗೆ ಕಿವಿ ಸೋರುತ್ತಂತೆ..' ವಾರೆಗಿತ್ತಿ ಭವನಿ ಕೇಳುತ್ತಿದ್ದಳು. ನಾಗಶ್ರೀ

ಅವನಂತವರು ಬೇಕಾದಷ್ಟು ಜನರನ್ನು ಕಂಡಿದ್ದಾನೆ ರಾಮಚಂದ್ರ. ಗಂಟೆಗಟ್ಟಲೆ ಬಸ್ಸಿಗೆ ಕಾಯುತ್ತಾರೆ. ಅದು ಹೆಜ್ಜೆಹೆಜ್ಜೆಗೆ ನಿಲ್ಲುತ್ತಾ, ಇಳಿವವರನ್ನು ಇಳಿಸುತ್ತಾ, ಕೈ ಅಡ್ಡ ಹಿಡಿದವರನ್ನು ಹತ್ತಿಸಿಕೊಳ್ಳುತ್ತಾ, ಆಮೆ ನಡಿಗೆಯಲ್ಲಿ ಸಾಗಿದರೂ ಸೈರಣೆ ಕಳೆದುಕೊಳ್ಳುವುದಿಲ್ಲ. ಆದರೆ ಬಸ್ಸು ನಿಲ್ಲುವುದರೊಳಗೆ ಕೆಳಗೆ ಇಳಿದುಕೊಳ್ಳಲು ಅದ್ಯಾಕೆ ಅವಸರ? ತಳ್ಳಾಟ?

ಇಳಿವ ಜಾಗ ಹತ್ತಿರ ಬಂದಾಗ ಎಲ್ಲರಿಗಿಂತಾ ಮುಂದೆ ನುಗ್ಗಿ, ಇಳಿಯಲು ತಯಾರಾಗಿ ಬಾಗಿಲ ಬಳಿ ನಿಂತವನು ಬಸ್ಸು ಪೂರ್ತಿ ನಿಲ್ಲುವ ಮೊದಲೇ ಕೆಳಗೆ ಹಾರಿ, ಆಯ ತಪ್ಪಿತ್ತು. ಕೆಳಗೆ ಬಿದ್ದವನ ಮೈಮೇಲೆ ಬಸ್ಸಿನ ಹಿಂಬದಿಯ ಚಕ್ರ ಹರಿದು ಹೋಗಿತ್ತು. ಕಣ್ಣು ಮುಚ್ಚಿ ತೆಗೆಯುವುದರಲ್ಲಿ ಎನ್ನುವಂತೆ ಕ್ಷಣದ ಹಿಂದೆ ಎಲ್ಲರಂತೆ ಉಸಿರಾಡುತ್ತಿದ್ದ ಒಂದು ಚಟುವಟಿಕೆಯ ತುಂಬು ಜೀವ ಉಸಿರು ಕಳೆದುಕೊಂಡು ಇನ್ನೆಂದೂ ಬಾರದ ಲೋಕಕ್ಕೆ ಹೊರಟು ಹೋಗಿತ್ತು. ಬದುಕು ಅಂದರೆ ಇದೇನಾ? ಇಷ್ಟೇನಾ?

ಆಯುಸ್ಸು ಇದ್ದಿದ್ದೇ ಅಷ್ಟು ಎನ್ನುವ ವೇದಾಂತದ ಮಾತಾಡುವುದು ಸಮಾಧಾನ ಕಂಡುಕೊಳ್ಳಲು ಹುಡುಕಿಕೊಂಡಿರುವ ಒಂದು ಅವಲಂಬನೆ. ಒಂದು ಇರುವೆ ಕಾಲಡಿ ಸಿಕ್ಕಿ ಹೊಸಕಿ ಹೋಗುವಂತೆ ರಘುರಾಮನಂತಾ ಪ್ರಾಯದ ಯುವಕ ಜಜ್ಜಿ ಹೋಗಿದ್ದ. ಸುದ್ದಿ ಮನೆ ತಲುಪಿದ್ದೇ ರಾಮಚಂದ್ರ ಕಂಗಾಲಾಗಿ ಉಟ್ಟ ಬಟ್ಟೆಯಲ್ಲಿ ಘಟನಾಸ್ಥಳಕ್ಕೆ ದೌಡಾಯಿಸಿದ್ದ. ಹೆತ್ತ ತಾಯಿಗೆ ವಿಷಯ ತಿಳಿಸಿರಲಿಲ್ಲ. ಕೈ ಹಿಡಿದ ಹೆಂಡತಿಗೂ..

★★★

ಯಾರು ಎಷ್ಟು ಅತ್ತರೇನು, ಕರೆದರೇನು, ನಡೆಯಬೇಕಾದ ಕ್ರಿಯಾಕರ್ಮಗಳೆಲ್ಲಾ ವಿಧಿವಿಧಾನಗಳಂತೆ ನಡೆದು ಹೋದುವು. ಅಪರಕ್ರಿಯೆಗೆ